**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ**
**ಕನಕಪುರ**

**ಸಿ.ಸಿ ನಂಃ 491/2009**

| | | | |
|---|---|---|---|
| **ಚಾಸಾ ಃ** | **1** | **ಪ್ರಾಸಾಃ-** | **2** |

| | |
|---|---|
| ಹೆಸರು | ಮಹೇಶ್ ಕೆ.ಎಸ್ |
| ತಂದೆಯ ಹೆಸರು | ಲೇಟ್ ಸೋಮಶೇಖರಯ್ಯ |
| ವಯಸ್ಸು | **46** |
| ಉದ್ಯೋಗ | ಅಬಕಾರಿ ಉಪಾಧ್ಯಕ್ಷರು, ಬೆಂಗಳೂರು |
| ವಿಳಾಸ | ಬೆಂಗಳೂರು |

**ದಿಃ 08.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ದಿಃ 05.01.2005 ರಿಂದ ದಿಃ 22.10.2009 ರವರೆಗೆ ಕನಕಪುರ ದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **07.11.2007** ರಂದು ಖಚಿತ ಮಾಹಿತಿ ಮೇರೆಗೆ ನಾನು ಮತ್ತು ಸಿಬ್ಬಂದಿ ಪಂಚರು ಹಾಗೂ ಸಿಬ್ಬಂದಿಯೊಂದಿಗೆ ಹಾರೋಹಳ್ಳಿಯಲ್ಲಿ ಎರೆಹಳ್ಳಿ ರಸ್ತೆ ಯಲ್ಲಿ ಹೋಗುತ್ತಿರುವಾಗ ಎರೆಹಳ್ಳಿ ಗ್ರಾಮಕ್ಕೆ ಅಕ್ರಮವಾಗಿ ನಕಲಿ ಮದ್ಯ ಸಾಗಾಣಿಕೆ ಆಗಿದೆ ಎಂದು ಬಂದ ಮಾಹಿತಿ ಮೇರೆಗೆ ಎರೆಹಳ್ಳಿ ಗ್ರಾಮದ ರಸ್ತೆಯ ಬಲಭಾಗದಲ್ಲಿರುವ ಮನೆಯ ಮುಂದೆ ಒಂದು ಕಾರು ನಿಂತಿರುವುದು ಕಂಡು ಬಂದಿತ್ತು. ಕಾರಿನಿಂದ ಆಸಾಮಿಗಳು ಏನೋ ಇಳಿಸುತ್ತಿರುವುದು ಕಂಡು ಬಂದಿತ್ತು. ನಮ್ಮನ್ನು ನೋಡಿ ಆಸಾಮಿಗಳು ಓಡಿ ಹೋಗಲು

ಪ್ರಯತ್ನಿಸಿರುತ್ತಾರೆ. ಅದರಲ್ಲಿ **3** ಜನರನ್ನು ಹಿಡಿದಿರುತ್ತೇವೆ. ಮುಂದೆ ಇದ್ದ ದ್ವಿ ಚಕ್ರ ವಾಹನದಲ್ಲಿ ಪರಾರಿಯಾಗಿರುತ್ತಾನೆ.

ಓಡಿ ಹೋಗುತ್ತಿದ್ದ ಆಸಾಮಿಗಳನ್ನು ಹಿಡಿದು ವಿಚಾರಿಸಲಾಗಿ ವಾಹನದಲ್ಲಿ ಮತ್ತು ಮನೆಯಲ್ಲಿ ಮದ್ಯ ಇದೆ ಅದಕ್ಕೆ ಹೋಗುತ್ತಿದ್ದೇವೆ ಎಂದು ಹೇಳಿರುತ್ತಾನೆ. ಅವರ ಹೆಸರು ಕೇಳಲಾಗಿ ಮಂಜುನಾಥ ಬಿನ್ ವೆಂಕಟಾಭೋವಿ ಎರೆಹಳ್ಳಿ ಗ್ರಾಮದ ವಾಸಿ, ವೆಂಕಟೇಶ ಬಿನ್ ವೆಂಕಟಪ್ಪ ಅರೆಗಡಕಲ್ಲು ವಾಸಿ, ಹುಚ್ಚಯ್ಯ ಬಿನ್ ಬಸವಯ್ಯ ಬೆಂಗಳೂರು ನಗರ ವಾಸಿ ಎಂದು ಹೇಳಿರುತ್ತಾರೆ.

ಕಾರ್ ನಂಬರ್ ಪರಿಶೀಲಿಸಿದಾಗ **CKE -4660** ಮಾರುತಿ **800** ಆಗಿರುತ್ತದೆ. ಇದೇ ವಾಹನದಿಂದ ನಕಲಿ ಮದ್ಯ ಸಾಗಾಣಿಕೆ ಮಾಡುತ್ತಿರುವುದು ಎಂದು ಭಾವಿಸಿಕೊಂಡು ಕಾರಿನ ಚಾಲಕ ಮತ್ತು ಮಾಲೀಕರ ಹೆಸರು ಕೇಳಲಾಗಿ ಹುಚ್ಚಯ್ಯ ಎಂದು ಹೇಳಿರುತ್ತಾರೆ. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಅನ್ನು ತರಲು ಸಮಯಾವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಶೋಧನಾ ವಾರಂಟ್ ಅನ್ನು ತಯಾರಿಸಿ ಸಿಬ್ಬಂದಿಯಿಂದ ಕಾರನ್ನು ಶೋಧನೆ ಮಾಡಲಾಗಿ ಕಾರಿನ ಹಿಂಬದಿ ಸೀಟ್ ಇರುವ ಜಾಗದಲ್ಲಿ **7** ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿತ್ತು. ಅದರಲ್ಲಿ ಒಂದು ರಟ್ಟಿನ ಪೆಟ್ಟಿಗೆ ಬಾಕ್ಸ್ **180** ಎಂ ಎಲ್ ನ **48** ಬಾಟಲ್ ಓರಿಜಿನಲ್ ಚಾಯ್ಸ್ ವಿಸ್ಕಿ ಇರುವುದು ಕಂಡು ಬಂದಿರುತ್ತದೆ. ಸದರಿ ಮಾಲಿನ ಮೇಲೆ ಕರ್ನಾಟಕ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂದು ಬರೆದಿರುವುದು ಕಂಡು ಬಂದಿತ್ತು.

ಕಾರಿನ ಕೆಳಗೆ **7** ರಟ್ಟಿನ ಬಾಕ್ಸ್ ಗಳು ಕಂಡು ಬಂದಿತ್ತು. ತಲಾ ಒಂದೊಂದು ಬಾಕ್ಸ್ ನಲಿ ಬಾಕ್ಸ್ **180** ಎಂ ಎಲ್ ನ **48** ಬಾಟಲ್ ಓರಿಜಿನಲ್ ಚಾಯ್ಸ್ ವಿಸ್ಕಿ ಇರುವುದು ಕಂಡು ಬಂದಿರುತ್ತದೆ. ಮನೆಯಲ್ಲಿ ದಾಸ್ತಾನು ಬಗ್ಗೆ ಕೇಳಲಾಗಿ ಹೌದು ಎಂದು ಒಪ್ಪಿ ಕೊಂಡಿರುತ್ತಾರೆ.ಮನೆಯ ಒಳಗೆ ಶೋಧನಾ ವಾರಂಟ್ ಅನ್ನು ನ್ಯಾಯಾಲಯದಿಂದ ತರಲು ಸಮಯಾವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ತಯಾರಿಸಿ ಮನೆಯ ಹೊರಾಂಡಕ್ಕೆ ಅಂಟಿ ಕೊಂಡಿರುವ ಕೋಣೆಯಲ್ಲಿ **8** ರಟ್ಟಿನ ಬಾಕ್ಸ್ ಗಳು ಕಂಡು ಬಂದಿತ್ತು. ತಲಾ ಒಂದೊಂದು

ಬಾಕ್ಸ್ ನಲಿ ಬಾಕ್ಸ್ **180** ಎಂ ಎಲ್ ನ **48** ಬಾಟಲ್ ಓರಿಜಿನಲ್ ಚಾಯ್ಸ್ ವಿಸ್ಕಿ ಇರುವುದು ಕಂಡು ಬಂದಿರುತ್ತದೆ.

ಮಯಿನಾಥ ರವರನ್ನು ಕೇಳಲಾಗಿ ಬೆಂಗಳೂರಿನಿಂದ **30** ರಟ್ಟಿನ ಪೆಟ್ಟಿಗೆ ಮದ್ಯವನ್ನು ತರಿಸಿರುವುದಾಗಿ ಹೇಳಿರುತ್ತಾರೆ ಅದರಲ್ಲಿ **7** ರಟ್ಟಿನ ಪೆಟ್ಟಿಗೆಯ ಮದ್ಯವನ್ನು ಕಾಶಿ ಕೃಷ್ಣಮೂರ್ತಿ ರವರಿಗೆ ಬೇರೆ ಗ್ರಾಮಕ್ಕೆ ಸಾಗಾಣಿಕೆ ಮಾಡಿಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಉಳಿದ **23** ಪೆಟ್ಟಿಗೆಗಳು ಮಾತ್ರ ಇಲ್ಲಿ ಇರುತ್ತವೆ ಎಂದು ಹೇಳಿರುತ್ತಾರೆ.

ಹುಚ್ಚಯ್ಯ ರವರನ್ನು ಎಲ್ಲಿಂದ ಮದ್ಯವನ್ನು ತೆಗೆದುಕೊಂಡು ಬಂದೆ ಎಂದು ಕೇಳಲಾಗಿ ಚಂದ್ರ ಎಂದು ಹೇಳಿ ಅವರ ನಂಬರ್ ಅನ್ನು ನೀಡಿ ಕಗ್ಗಲೀಪುರದ ಬಳಿ ಇರುವ ನೈಸ್ ರಸ್ತೆಗೆ ಮದ್ಯವನ್ನು ತಂದು ಕೊಡುತ್ತಾರೆ ಎಂದು ಹೇಳಿರುತ್ತಾರೆ. ವೆಂಕಟೇಶ್ ರವರನ್ನು ವಿಚಾರಿಸಲಾಗಿ ನಾನು ಎಲ್ಲಿಗೆ ಹೇಳಿದರೆ ಅಲ್ಲಿಗೆ ತಂದು ಕೊಡುತ್ತಾರೆ ಎಂದು ಹೇಳಿರುತ್ತಾರೆ. ಹುಚ್ಚಯ್ಯರವರು ವೆಂಕಟೇಶ್ ರವರು ಹೇಳಿದ ಮೇರೆಗೆ ಎರಡು ಬಾರಿ ಇದೇ ಸ್ಥಳಕ್ಕೆ ಮದವನ್ನು ತಂದು ಕೊಟ್ಟಿದ್ದೇನೆ ಎಂದು ಹೇಳಿರುತ್ತಾರೆ.

ವೆಂಕಟೇಶ್ ರವರ ಜೇಬಿನಲ್ಲಿ **20** ಸಾವಿರ ಹಣ ದೊರೆತಿರುತ್ತದೆ. ಸದರಿ ಹಣವು ಕಾಶಿರವರಿಂದ ಪಡೆದಿರುತ್ತೇನೆ ನಾನು ಚಂದ್ರ ಎನ್ನುವವರಿಗೆ ಮದ್ಯ ಖರೀದಿ ಮಾಡಿರುವ ಸಲುವಾಗಿ ನೀಡಬೇಕೆಂದು ಹೇಳಿರುತ್ತಾನೆ. ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುವುದು ಮತ್ತು ಶೇಖರಣೆ ಮಾಡುವುದು ಅಪರಾಧ ಎಂದು ತಿಳಿಸಿ ಸ್ಥಳದಲ್ಲಿದ್ದಂತಹ **23** ಬಾಕ್ಸ್ ಗಳಿಂದ **180** ಎಂ ಎಲ್ ತಲಾ ಒಂದರಂತೆ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಬಾಟಲ್ ಗಳಿಗೆ ಬಟ್ಟೆ ಸುತ್ತಿ ದಾರ ಕಟ್ಟಿ ಹರಗು ಹಾಕಿ ಸೀಲ್ ಮಾಡಲಾಯಿತು.

ಮಹಜರ್ ಅನ್ನು ದೀಪದ ಸಹಾಯದಿಂದ ರಾತ್ರಿ **11.30** ರಿಂದ **01.15** ರವರೆಗೆ ಮಹಜರ್ ಕ್ರಮ ಜರುಗಿಸಲಾಯಿತು. ನಂತರ ಮದ್ಯವನ್ನು, ಹಣವನ್ನು ಮತ್ತು ಕಾರ್ ಅನ್ನು ಅಮಾನತ್ತು ಪಡಿಸಿಕೊಂಡು ಸದರಿ ಮಾಲನ್ನು ಮಾಲು ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಯಿತು. ನಂತರ ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೇವೆ.

ನಂತರ ಪ್ರಕರಣದ ತನಿಖೆ ಮುಂದುವರೆಸಿ **23** ಬಾಟಲ್ ಗಳನ್ನು ಸಂಜೀವ್ ಮೂರ್ತಿ ದಿನಾಂಕ **26.12.2007** ರಂದು ಚಾಸಾ-**6** ರವರನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಲು ನೇಮ ಮಾಡಿರುತ್ತೇನೆ.

ದಿನಾಂಕ **07.01.2008** ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಚಾಸಾ-**6** ರಿಂದ ಪಡೆದು ಕಡತಕ್ಕೆ ಲಗತ್ತಿಸಿರುತ್ತೇನೆ. ವರದಿಯಲ್ಲಿ ಈಥೇನ್ ಅಂಶ ಇದ್ದ ಕಾರಣ ಮಾನವನ ಸೇವನೆಗೆ ಯೇಗ್ಯವಾಗುವುದಿಲ್ಲ ಎಂದು ಕಂಡು ಬರುತ್ತದೆ. **4** ನೇ ಆರೋಪಿಯನ್ನು ದಿನಾಂಕ **19.07.2008** ರಂದು ದಸ್ತಗರಿ ಮಾಡಿ ಆತನ ಹೇಳಿಕೆಯನ್ನು ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಕೊಳಗಾನಹಳ್ಳಿ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ದಿನಾಂಕ **27.02.2009** ಬರೆದು ಮನೆಯ ದೃಢೀಕರಣ ಪತ್ರವನ್ನು ಮಂಜುನಾಥ ಮತ್ತು ಅವರ ಕುಟುಂಬದವರು ವಾಸ ಮಾಡುತ್ತಾರೆಂದು **02.03.2009** ಕ್ಕೆ ನೀಡಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನಿ ಪಿ **1** ರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ **1** (ಬಿ) ಎಂದು, **FIR** ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ ಪಿ **2** ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ **2** (ಎ) ಎಂದು, **2** ಶೋಧನಾ ವಾರಂಟ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ ಪಿ **3** ಮತ್ತು **4** ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ **3** (ಎ) ಮತ್ತು **4** ಎ ಎಂದು, ರಾಸಾಯನಿಕ ಪರೀಕ್ಷೆ ಅರ್ಜಿಯನ್ನು ನಿಪಿ-**5** ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ **5** (ಎ) ಎಂದು, ಮಾದರಿ ಸೀಲ್‌ಯನ್ನು ನಿಪಿ-**6** ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ **6** (ಎ) ಎಂದು, ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-**7** ಎಂದು, ದೃಢೀಕರಣ ಪತ್ರವನ್ನು ನಿಪಿ-**8** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ **23** ಮಾದರಿ ಬಾಟಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು **1** ರಿಂದ **23** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1** ಎ ಯಿಂದ **23** ಎ ಎಂದು ಗುರುತಿಸಲಾಗಿದೆ.

ಆ ದಿನ ದಸ್ತಗಿರಿ ಮಾಡಿದಂತಹ ವ್ಯಕ್ತಿಯೇ ನ್ಯಾಯಾಲಯದ ಮುಂದಿರುವ **3** ನೇ ಆರೋಪಿತರಾಗಿರುತ್ತಾರೆ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು.**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**

ಓ ಹೇ ಕೇ ಸ ಇ